ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಕೆಲವು ಜಾತಿಗಳು ಚಿನ್ನಪ್ಪರೆಡ್ಡಿ ಆಯೋಗ ಬಂದಾಗ ಅವರಿಗೆ ಸಕಾಲಕ್ಕೆ ಸರಿಯಾದ ರೀತಿ ಮಾಹಿತಿ ಕೊಟ್ಟಿಲ್ಲ. ಶಾಸಕಮಿತ್ರರು ಹೇಳುವ ವಿಷಯದಲ್ಲಿ ಯಾವುದೇ ಪಟ್ಟಿಯಲ್ಲಿ ಇವರನ್ನು ಸೇರಿಸಿಲ್ಲ. ಹಿಂದುಳಿದ ವರ್ಗದಲ್ಲೂ ಸೇರಿಲ್ಲ ಮತ್ತು ಪರಿಶಿಷ್ಟ ಜಾತಿ ಮತ್ತು ವರ್ಗದಲ್ಲೂ ಸೇರಿಲ್ಲ. ತಮಗೆ ಗೊತ್ತಿದೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಸೇರಿಸುವ ಅಧಿಕಾರ ಇರತಕ್ಕದ್ದು ಕೇಂದ್ರಸರ್ಕಾರಕ್ಕೆ. ನಾವು ಕೇವಲ ಶಿಫಾರಸ್ಸು ಮಾತ್ರ ಮಾಡಬಹುದು. ಮೈನ್ ಕಮಿಟಿ ಇರಲಿಲ್ಲ. ಈಗ ಈ ಕಮಿಟಿ ಅಸ್ತಿತ್ವಕ್ಕೆ ಬಂದಿದೆ. ಬಹಳ ಜಾತಿಗಳು ಬೇರೆ ಬೇರೆ ವರ್ಗಕ್ಕೆ ಸೇರಬೇಕು ಎಂಬ ಬೇಡಿಕೆಯನ್ನಿಟ್ಟಿವೆ. ಆ ಕಮಿಟಿ ಮುಂದೆ ಚರ್ಚೆ ಮಾಡಿ ಶಿಫಾರಸ್ಸು ಮಾಡತಕ್ಕ ಒಂದು ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಚ್.ಡಿ.ಬಸವರಾಜು: ಮಾನ್ಯ ಮಂತ್ರಿಗಳು ನಾವು ಶಿಫಾರಸ್ಸು ಮಾಡುತ್ತೇವೆ, ಕೇಂದ್ರದವರು ಅದನ್ನು ಮಾನ್ಯತೆ ಮಾಡಬೇಕು ಎಂದು ಹೇಳಿದರು. ಇದು 1976ರಿಂದ ಪೆಂಡಿಂಗ್ ಇದೆ.

ಅಧ್ಯಕ್ಷರು: ಈಗ ಸುಲಭ ಆಯಿತಲ್ಲಾ. ಇವರು ಶಿಫಾರಸ್ಸು ಮಾಡುತ್ತಾರೆ. ಯಡಿಯೂರಪ್ಪನವರನ್ನು ಕೇಂದ್ರಕ್ಕೆ ಕರೆದುಕೊಂಡುಹೋಗಿ ಮಾಡಿಸಿಕೊಂಡು ಬನ್ನಿ.

ಶ್ರೀ ಎಚ್.ಡಿ.ಬಸವರಾಜು: ನಾನು ಹೇಳಿದಂಥ ಉದ್ದೇಶ ಏನೆಂದರೆ ಈ ಸದನದ ಮೂಲಕ ಮತ್ತೊಮ್ಮೆ ಕೇಂದ್ರದಮೇಲೆ ಒತ್ತಾಯ ತರುವಂಥ ಒಂದು ಶಿಫಾರಸ್ಸನ್ನು ಮಾಡಬೇಕು ಎಂದು.

ಅಧ್ಯಕ್ಷರು: ಅವರು ಮಾಡುತ್ತೇವೆಂದು ಹೇಳಿದ್ದಾರೆ. ಅವರು ಆ ಕೆಲಸವನ್ನು ಮಾಡುತ್ತಾರೆ. ಉಳಿದ ಕೆಲಸವನ್ನು ನೀವು ಮಾಡಿ. ಆ ಜನಾಂಗಕ್ಕೆ ಅನುಕೂಲವಾಗಲಿ.

ಶ್ರೀ ಆರಗ ಜ್ಞಾನೇಂದ್ರ: ಅಧ್ಯಕ್ಷರೆ, ಉಳಿದ ಎಲ್ಲಾ ಕೆಲಸವನ್ನು ಇವರು ಫೈಲ್ ಹೊತ್ತಿಕೊಂಡುಹೋಗಿ ಕೇಂದ್ರಸರ್ಕಾರದಿಂದ ಮಾಡಿಸಿಕೊಂಡು ಬಂದರು. ಈ ವರ್ಗಕ್ಕೆ ಸಂಬಂಧಪಟ್ಟ ಕೆಲಸವನ್ನು ಮಾಡಿಲ್ಲವಲ್ಲಾ ಎಂದು ಅವರು ಹೇಳುತ್ತಿದ್ದಾರೆ.

ಮಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಶುದ್ಧೀಕರಣ.

38 (99)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಜಪ್ಪಿನ ಮೊಗರು ಪ್ರದೇಶಕ್ಕೆ

ನಗರದಿಂದ ನೀರು ಸರಬರಾಜುಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಜಪ್ಪಿನ ಮೊಗರಿಗೆ ಸರಬರಾಜುಗೊಳ್ಳುತ್ತಿರುವ ನೀರನ್ನು ಯಾವ ಸ್ಥಳದಲ್ಲಿ ಶುದ್ಧೀಕರಣಗೊಳಿಸಲಾಗುತ್ತಿದೆ?

ಇ) ನಗರದ ಯಾವ ಭಾಗಗಳಿಗೆ ಯಾವ ಯಾವ ಸ್ಥಳಗಳಿಂದ ಶುದ್ಧೀಕರಣಗೊಳಿಸಿದ ನೀರು ಸರಬರಾಜು ಮಾಡಲಾಗುತ್ತಿದೆ.

ಈ) ಜಪ್ಪಿನ ಮೊಗರಿನ ಪ್ರದೇಶದ ಜನರು ಅಶುದ್ಧ ನೀರು ಸೇವಿಸುವುದರಿಂದ ಕರಳು ಬೇನೆ, ಜಠರ ರೋಗಗಳಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಅ) ಈ ವಿಷಯ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಜಪ್ಪಿನ ಮೊಗರು ಪ್ರದೇಶಕ್ಕೆ ಭಾಗಶಃ ಸ್ಥಳೀಯ ಕೊಳವೆ ಬಾವಿ ಹಾಗೂ ತುಂಬಿಯಿಂದ ನಗರಕ್ಕೆ ಪೂರೈಕೆಯಾಗುತ್ತಿರುವ ಕ್ಲಾರಿಫೈಡ್ ನೀರನ್ನು ಒದಗಿಸಲಾಗುತ್ತಿದೆ. ನೀರು ಸರಬರಾಜು ನಿರ್ವಹಣೆಯನ್ನು ಮಹಾನಗರಪಾಲಿಕೆಗೆ ಹಸ್ತಾಂತರಿಸಲಾಗಿದ್ದು, ನೀರು ಸರಬರಾಜು ವಿತರಣೆ ಹಾಗೂ ನಿರ್ವಹಣಾ ಉಸ್ತುವಾರಿಯನ್ನು ಮಹಾನಗರ ಪಾಲಿಕೆ ನಡೆಸುತ್ತಿದೆ.

ಆ) ತುಂಬಿ ಜಲಮೂಲಸ್ಥಾವರದಲ್ಲಿ ಈ ಭಾಗಕ್ಕೆ ಪೂರೈಕೆಯಾಗುತ್ತಿರುವ ನೀರನ್ನು ಕ್ಲಾರಿಫೈಡ್ ಮಾಡಲಾಗುತ್ತಿದೆ.

ಇ) ನಗರದ ಕೇಂದ್ರ ಭಾಗಕ್ಕೆ ಬೈಂದೂರು ನೀರು ಶುದ್ಧೀಕರಣಾಗಾರದಿಂದ ಪೂರೈಕೆಯಾಗುತ್ತಿದೆ. ನಗರದ ಹೊರ ವಲಯಗಳಿಗೆ ಸ್ಥಳೀಯ ಕೊಳವೆ ಬಾವಿ ಹಾಗೂ ನೀರಿನ ಮುಖ್ಯ ಕೊಳವೆಗಳಿಂದ ಕ್ಲಾರಿಫೈಡ್ ನೀರನ್ನು ಮಹಾನಗರಪಾಲಿಕೆ ಉಸ್ತುವಾರಿಯಲ್ಲಿ ಒದಗಿಸಲಾಗುತ್ತಿದೆ.

ಈ) ನಗರದಲ್ಲಿ ಕರಳುಬೇನೆ, ಜಠರ ರೋಗಗಳ ಪ್ರಕರಣಗಳು ಇಮುವರೆಗೆ ವರದಿಯಾಗಿರುವುದಿಲ್ಲವೆಂದು ಮಹಾನಗರ ಪಾಲಿಕೆಯಿಂದ ಮಾಹಿತಿ ಸಂಗ್ರಹಿಸಲಾಗಿದೆ.

11.30 ಎ.ಎಂ

ಶ್ರೀ ಕೆ.ಜಯರಾಮಶೆಟ್ಟಿ: ಮಾನ್ಯ ಅಧ್ಯಕ್ಷರೆ, ನಾನು ನನ್ನ ಕ್ಷೇತ್ರದ ಮಂಗಳೂರು ಮಹಾನಗರ ಪಾಲಿಕೆಯ ಜಪ್ಪಿಮೊಗರು ಪ್ರದೇಶಕ್ಕೆ ಕುಡಿಯುವ ನೀರಿನ ಸರಬರಾಜಿನ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಉತ್ತರವಾಗಿ ಮಾನ್ಯ ಮಂತ್ರಿಗಳು ಕ್ಲಾರಿಫೈಡ್ ನೀರು ಒದಗಿಸುತ್ತಿದ್ದೇವೆಂದು ಹೇಳಿದ್ದಾರೆ. ಕ್ಲಾರಿಫೈಡ್ ನೀರು ಅಂದರೇನು ಎಂಬುದು ನನಗ

ಗೊತ್ತಾಗಲಿಲ್ಲ. ಅದರ ಬಗ್ಗೆ ಹೇಳಬೇಕು. ತುಂಬೆನೆಂಟೆ ಡ್ಯಾಮ್‌ನಿಂದ ಬರುವ ನೀರಿನಲ್ಲಿ ಮೀನಿನ ಮರಿಗಳು, ಕಸಕಡ್ಡಿಗಳು ತುಂಬಿದ್ದು ಅಂಥ ನೀರನ್ನು ಸರಬರಾಜು ಮಾಡುತ್ತಿದ್ದಾರೆ. ಬೇಡದ ಎಲ್ಲಾ ವಸ್ತುಗಳು ಇರುವ ಜಾಕ್‌ವೆಲ್ ನೀರನ್ನು ಜಪ್ಪಿನ ಮೊಗರು ಗ್ರಾಮಕ್ಕೆ ಸರಬರಾಜು ಮಾಡುತ್ತಿರುವುದರಿಂದ ಸುಮಾರು ಎರಡು ಸಾವಿರ ಮನೆಗಳಿಗೆ 10 ಸಾವಿರ ಜನಗಳಿಗೆ ಆರೋಗ್ಯದೃಷ್ಟಿಯಿಂದ ತೊಂದರೆಯಾಗಿದೆ. ಎರಡನೆಯದಾಗಿ, ಕೆಲವು ಕಡೆ ಕೊಳವೆಬಾವಿ ಹಾಕಿ ನೀರು ಸರಬರಾಜು ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಕೊಳವೆಬಾವಿಗಳನ್ನು ನೇತ್ರಾವತಿ ನದಿ ಸಮೀಪದಲ್ಲಿ ಹಾಕಿರುವುದರಿಂದ ಉಪ್ಪುನೀರು ಬರುತ್ತಾ ಉಂಟು. ಜೊತೆಗೆ ಮಂಗಳೂರಿನ ಡ್ರೈನೇಜ್ ನೀರನ್ನು ಓಪನ್ ಜಾಗದಲ್ಲಿ ಬಿಡುತ್ತಿರುವುದರಿಂದ ಅಶುದ್ಧ ನೀರು ಸರಬರಾಜು ಆಗುತ್ತಿದೆ. ದಯವಿಟ್ಟು ಅದರ ಬಗ್ಗೆ ತಾವು ಗಮನಹರಿಸಿ ಆ ಜನರಿಗೆ ಶುದ್ಧ ನೀರು ಕೊಡಲಿಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ? ಮಂಗಳೂರು ಮಹಾನಗರ ಪಾಲಿಕೆಯಾಗಿ ಸುಮಾರು 20 ವರ್ಷಗಳಾಯಿತು ಬಹಳಷ್ಟು ವರ್ಷಗಳಾದರೂ ಈಗಲೂ ಕೂಡ ಶುದ್ಧ ನೀರು ಕೊಡಲಿಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಮಂಗಳೂರು ನಗರಕ್ಕೆ ಸಮಗ್ರ ನೀರು ಸರಬರಾಜು ಯೋಜನೆ ವ್ಯವಸ್ಥೆ ಇಲ್ಲ. ಅದನ್ನೆಲ್ಲಾ ಮಾಡುವಂತಹ ಕೆಲಸವನ್ನು ಈಗ ಮಾಡುತ್ತಿದ್ದಾರೆ. ಸುಮಾರು 70 ಭಾಗದಷ್ಟು ಕೆಲಸ ಮುಗಿದಿದೆ. ಅದರಲ್ಲಿ ಬೈಂದೂರಿಗೆ ನೀರು ಸಪ್ಲೈ ಮಾಡುವ ವ್ಯವಸ್ಥೆ ಇದೆ. ಕೇಂದ್ರ ಭಾಗದ ಮಂಗಳೂರಿಗೆ ನೀರು ಸರಬರಾಜು ಆಗುತ್ತದೆ. ಜಪ್ಪಿನಮೊಗರಿಗೆ ನೀರು ಸರಬರಾಜು ಆಗುವಂಥದ್ದು ಕೊಳವೆಬಾವಿಗಳಿಂದ. ಅದು ಕ್ಲಾರಿಫೈಡ್ ವಾಟರ್, ಅದಕ್ಕೆ ಅಲಮ್ ಮಿಕ್ಸಿಂಗ್ ಮಾಡಿರುತ್ತಾರೆ ಸೆಟಲ್ ಆಗಿರುತ್ತದೆ. ಅದು ಕ್ಲೋರಿನೇಟೆಡ್ ವಾಟರ್ ಅಲ್ಲ. ಅದು ಫಿಲ್ಟರ್ ಆಗಿರುವುದಿಲ್ಲ. ಫಿಲ್ಟರ್ ವಾಟರ್‌ನ್ನು ಬೈಂದೂರಿಗೆ ಸಪ್ಲೈ ಮಾಡುವಂತಹ ವ್ಯವಸ್ಥೆ ಇದೆ. ಅದಕ್ಕೆ ಥ್ರೀ ಆಸ್ಪೆಕ್ಟ್ ಮಾಡಿದ್ದಾರೆ. ಮಾನ್ಯ ಸದಸ್ಯರು ಹೇಳಿದಹಾಗೆ ಮಂಗಳೂರು ನಗರದಲ್ಲಿ ಕರುಳುಬೇನೆ ಜಠರ ರೋಗ ಬಂದಿವೆ ಎಂದು ಹೇಳಿದರೆ ಅದು ಅಲ್ಲಿನ ನೀರಿನ ವಿತರಣೆಯಿಂದಲ್ಲ, ಅದರ ಜವಾಬ್ದಾರಿಯನ್ನು ಮಂಗಳೂರು ಮಹಾನಗರ ಪಾಲಿಕೆ ತೆಗೆದುಕೊಂಡಿದೆ. ಅಂತಹ ಯಾವುದೇ ಒಂದು ಪ್ರಕರಣ ಇದುವರೆಗೆ ಬಂದಿಲ್ಲ. ಶುದ್ಧ ಕುಡಿಯುವ ನೀರು ಕೊಡುವಂತಹ ಕಾರ್ಯವನ್ನು ಸರ್ಕಾರ ಮಾಡುತ್ತದೆ. ಜಪ್ಪಿನ ಮೊಗರು ಹಾಗೂ ಇತರ ಹೊರವಲಯಗಳಲ್ಲಿ ಸಹ ಶುದ್ಧ ನೀರು ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಕೆ.ಜಯರಾಮಶೆಟ್ಟಿ: ಮಾನ್ಯ ಮಂತ್ರಿಗಳು ಕರುಳುಬೇನೆ ಮತ್ತು ಜಠರ ರೋಗ ಬಂದಿರುವ ಬಗ್ಗೆ ನಮಗೆ ರಿಪೋರ್ಟ್ ಬಂದಿಲ್ಲವೆಂದು ಹೇಳಿದರು. ರೋಗಿಗಳು ಯಾರೂ ಸರ್ಕಾರಿ ಆಸ್ಪತ್ರೆಗಳಿಗೆ ಹೋಗುವುದಿಲ್ಲ. ಪ್ರೈವೇಟ್ ಆಸ್ಪತ್ರೆಗಳಿಗೆ

ಹೋಗುತ್ತಾರೆ. ಆದ್ದರಿಂದ ನಾನು ಹೇಳುತ್ತಿದ್ದೇನೆ, ಡ್ರೈನೇಜ್ ವಾಟರ್, ಉಪ್ಪಿನ ನೀರು ನಳದಲ್ಲಿ ಬರುತ್ತಿರುವುದರಿಂದ ಅಶುದ್ಧವಾದ ನೀರನ್ನು ಬಿಡುತ್ತಿರುವುದರಿಂದ ಜನರ ಆರೋಗ್ಯದ ಮೇಲೆ ಗಂಭೀರವಾದ ಸಮಸ್ಯೆ ಉಂಟಾಗಿದೆ. ಆದಷ್ಟು ಶೀಘ್ರವಾಗಿ ಕುಡಿಯಲಿಕ್ಕೆ ಶುದ್ಧವಾದ ನೀರನ್ನು ಕೊಡಲಿಕ್ಕೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಬಿ.ಎನ್.ಬಚ್ಚೇಗೌಡ: ಆ ರೀತಿ ಏನಾದರೂ ಆಗಿದ್ದರೆ ಆಯುಕ್ತರನ್ನು ಕೇಳಿ ಸೂಕ್ತಕ್ರಮವನ್ನು ಕೈಗೊಳ್ಳುತ್ತೇನೆ.

ಶ್ರೀ ಕೆ.ಜಯರಾಮಶೆಟ್ಟಿ: ಒಂದು ವಿಷಯ ತಮ್ಮ ಗಮನಕ್ಕೆ ತರುತ್ತೇನೆ, ಆಯುಕ್ತರು ಏನು ಹೇಳಿದರು ಅಂದರೆ ''ಈ ವಿಚಾರವನ್ನು ಅಸೆಂಬ್ಲಿಯಲ್ಲಿ ಎತ್ತಿದರೆ ನೀರು ಕೊಡುವುದನ್ನು ಬಂದ್ ಮಾಡಬೇಕಾಗುತ್ತದೆಂದು'' ಹೇಳಿದ್ದಾರೆ.

ಶ್ರೀ ಬಿ.ಎನ್.ಬಚ್ಚೇಗೌಡ: ಆ ರೀತಿಯ ಬೆದರಿಕೆಯನ್ನು ಆತ ಹಾಕುವುದಿಲ್ಲ.

ಶ್ರೀ ಕೆ.ಜಯರಾಮಶೆಟ್ಟಿ: ಏಕೆಂದರೆ ಸರ್ಕಾರದಿಂದ ಒತ್ತಡ ಬರುತ್ತದೆ ನಾವು ನೀರು ನಿಲ್ಲಿಸಬೇಕಾಗುತ್ತದೆಂದು ಹೇಳಿದ್ದಾರೆ.

ಅಧ್ಯಕ್ಷರು: ನೀರು ಕೊಡಿಸುವ ವ್ಯವಸ್ಥೆ ಮಾಡಿಸೋಣ.

ಶ್ರೀ ಬಿ.ಎನ್.ಬಚ್ಚೇಗೌಡ: ಶುದ್ಧ ನೀರು ಕೊಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಚಾಮರಾಜನಗರದಲ್ಲಿರುವ ಉಪ್ಪಾರ ಹಾಗೂ ಮೇಲು ಸಕ್ಕರೆ ಜನಾಂಗದವರಿಗೆ ಸೌಕರ್ಯಗಳನ್ನು ಒದಗಿಸುವುದು

39 (202)

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಸೇರಿದಂತೆ ಹಿಂದುಳಿದ ಗಡಿ ಪ್ರದೇಶಗಳಲ್ಲಿ ಉಪ್ಪಾರ ಹಾಗೂ ಮೇಲು ಸಕ್ಕರೆ ಶೆಟ್ಟರ ಜನಾಂಗದವರು ತೀರ ಹಿಂದುಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ಜನಾಂಗದ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?